ಅ.ದಾ. ನಂ.284/22 ಡಿ .ಡಬ್ಲ್ಯೂ-1

ದಿನಾಂಕಃ 08.06.2026 ರಂದು ಡಿ.ಡಬ್ಲ್ಯೂ-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ವಾದಿ ಯಾವ ಸ್ವತ್ತಿಗೆ ದಾವೆ ಹೂಡಿರುತ್ತಾರೆ ಎಂದರೆ ಸ.ನಂ.3/1 ರಲ್ಲಿ 7 ಗುಂಟೆ. ದಾವಾ ಸ್ವತ್ತಿನ ಚೆಕ್ಕುಬಂದಿ ಏನು ಎಂದರೆ ಪೂ-ಶಂಕರಶೆಟ್ಟಿ, ಪ-ಚಂದ್ರು, ಉ-ಮನೆ ರಸ್ತೆ, ದ-ರಂಗಶೆಟ್ಟಿ ಬಿಟ್ಟುಕೊಂಡಿರುವ ಜಾಗ. ದಾವಾ ಸ್ವತ್ತು ಮೊದಲಿಗೆ ಯಾರಿಗೆ ಸೇರಿದ್ದು ಎಂದರೆ ಮೂಲತಃ ನನಗೆ ಸೇರಿರುತ್ತದೆ. ಸದರಿ ಸ್ವತ್ತನ್ನು ನಾನು ಹೇಗೆ ಪಡೆದುಕೊಂಡಿರುತ್ತೇನೆ ಎಂದರೆ ಒಟ್ಟು ಕುಟುಂಬದ ಜಮೀನಾಗಿದ್ದು ಹಿಸ್ಸೆ ಮುಖಾಂತರ ಬಂದಿರುತ್ತದೆ. ಹಿಸ್ಸೆ ಮಾಡುವ ಮೊದಲು ಸ್ವತ್ತು ಯಾರಿಗೆ ಸೇರಿದ್ದು ಎಂದರೆ ಲಕ್ಷ್ಮಮ್ಮ ಕೋಂ ನಾರಾಯಣಶೆಟ್ಟಿ ಸದರಿ ಲಕ್ಷ್ಮಮ್ಮರವರು ಸ್ವತ್ತನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಒಟ್ಟು ಕುಟುಂಬದಲ್ಲಿದ್ದಾಗ ವಾದಿ ಖರೀದಿಸಿರುತ್ತಾರೆ. ಖರೀದಿ ಮಾಡಿದ ನಂತರ ಖಾತೆ ವಾದಿ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಹಿಸ್ಸೆಯಾಗಿ ನನಗೆ ಕೊಟ್ಟಿರುತ್ತಾರೆ. ಹಿಸ್ಸೆ ಮಾಡಿಕೊಂಡಾಗ ಎಲ್ಲಾ ಸ್ವತ್ತುಗಳನ್ನು ಹಿಸ್ಸೆ ಮಾಡಿಕೊಂಡಿರುತ್ತಾರೆ. ಯಾವ ರೀತಿ ಹಿಸ್ಸೆ ಮಾಡಿಕೊಂಡಿರುತ್ತೀರ ಎಂದರೆ ಒ.ಎಸ್.239/13 ರಲ್ಲಿ. ಸದರಿ ವಿಭಾಗ ದಾವೆಯನ್ನು ನಾನೇ ಹೂಡಿರುತ್ತೇನೆ ಎಂದರೆ ಅವರೇ ಹಾಕಿಸಿರುತ್ತಾರೆ. ಸದರಿ ವಿಭಾಗ ದಾವೆಯಲ್ಲಿ ರಾಜಿ ಅರ್ಜಿ ಸಲ್ಲಿಸಿ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ರಾಜಿ ತೀರ್ಮಾನದ ಪ್ರಕಾರ ವಾದಿ ಹಿಸ್ಸೆಗೆ ಬಂದಿರುತ್ತದೆ ಎಂದರೆ ಮೋಸ ಮಾಡಿ ಮಾಡಿಸಿಕೊಂಡಿರುತ್ತಾರೆ.

2. ದಾವಾ ಸ.ನಂ.3/1 ರಲ್ಲಿ ಆರುಮುಕ್ಕಾಲು ಗುಂಟೆಯ ಚೆಕ್ಕುಬಂದಿ ಏನು ಎಂದರೆ ಪೂ-ನನ್ನ ಜಮೀನು, ಪ-ಚಂದ್ರಪ್ಪ, ಉ-ವಾದಿಯ ಮನೆ ಮತ್ತು ಸರ್ಕಾರಿ ರಸ್ತೆ, ದ-ವಾದಿಯ ಜಮೀನು. ಸದರಿ ಸ್ವತ್ತು ರಾಜಿ ಮುಖಾಂತರ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. 7 ಗುಂಟೆ ಕೊಟ್ಟಿರುತ್ತಾರೆ. ಸದರಿ ರಾಜಿ ಅರ್ಜಿಯಲ್ಲಿ ನನ್ನ ಭಾಗಕ್ಕೆ ಬಂದಿರುವ 6 3/4 ಗುಂಟೆಯ ಪೂ-ವೆಂಕಟಯ್ಯ, ಪ-ರಂಗಶೆಟ್ಟಿ, ಉ-ರಸ್ತೆ ಎಂದರೆ ಸರಿ. ದ-ಚನ್ನೇಗೌಡರ ಜಮೀನು ಎಂದರೆ ಸರಿಯಲ್ಲ. ರಾಜಿ ಮುಖಾಂತರ ನನಗೆ ಆರುಮುಕ್ಕಾಲು ಗುಂಟೆ ಮಾತ್ರ ಬಂದಿರುತ್ತದೆ ಎಂದರೆ ಸರಿಯಲ್ಲ. ನನಗೆ ಮೋಸ ಮಾಡಿ

ಖಾತೆ ಮಾಡಿಸಿಕೊಂಡಿರುತ್ತಾರೆ. ಮೋಸ ಮಾಡಿದ್ದಾರೆ ಎಂದು ಯಾವಾಗ ತಿಳಿದಿರುತ್ತದೆ ಎಂದರೆ ಖಾತೆ ಮಾಡಿಸಿಕೊಳ್ಳಲು ಹೋದಾಗ 2013-14 ರಲ್ಲಿ ತಿಳಿದಿರುತ್ತದೆ. ಸದರಿ ರಾಜಿ ತೀರ್ಮಾನದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೀರ ಎಂದರೆ ಇಲ್ಲ. ಪಂಚಾಯಿತಿಯಲ್ಲಿ ತೀರ್ಮಾನ ಮಾಡಿಕೊಂಡಿರುತ್ತೇವೆ. ಯಾವಾಗ ಪಂಚಾಯಿತಿ ತೀರ್ಮಾನವಾಗಿರುತ್ತದೆ ಎಂದರೆ 2013-14. ಬರವಣಿಗೆ ಆಗಿತ್ತೆ ಎಂದರೆ ಇಲ್ಲ. ಮೌಖಿಕವಾಗಿ ಮಾಡಿಕೊಂಡಿರುತ್ತೇವೆ. ಸದರಿ ಪಂಚಾಯಿತಿ ಆದ ನಂತರ ಖಾತೆಗಾಗಿ ಅರ್ಜಿ ಸಲ್ಲಿಸಿದ್ದೀರ ಎಂದರೆ ಇಲ್ಲ. ರಾಜಿ ತೀರ್ಮಾನದಂತೆ ಆಗಿರುವ ಖಾತೆಯನ್ನು ಪ್ರಶ್ನೆ ಮಾಡಿದ್ದೀರ ಎಂದರೆ ಇಲ್ಲ.

3. ದಾವಾ ಸ್ವತ್ತು ವಾದಿಗೆ ಹಿಸ್ಸೆ ಮುಖಾಂತರ ಬಂದ ಸ್ವತ್ತಾಗಿದ್ದು ಖಾತೆಯನ್ನು ದುರಸ್ತಾಗಿ ವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವೆ ಹೂಡುವ 15 ದಿನಗಳ ಪೂರ್ವದಲ್ಲಿ ಅತಿಕ್ರಮ ಪ್ರವೇಶ ಮಾಡುತ್ತೇನೆ ಎಂದು ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಹಿಸ್ಸೆ ಮುಖಾಂತರ ದಾವಾ ಸ್ವತ್ತು ನನ್ನ ಹಿಸ್ಸೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾನು ಇಲ್ಲದಿದ್ದರೂ ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಅವರೇ ನನಗೆ ತೊಂದರೆ ಕೊಡುತ್ತಿದ್ದಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.